

ಪ್ರಶಾಂತ ಪ್ರಕ್ಷುಬ್ಧನಾಗಿದ್ದ. "ಆಫೀಸಿಗೆ ಬರದೇ ಇವಳೆಲ್ಲಿ ಹೋದಳು?" ಎಂದು ಹುಡುಕುತ್ತಿದ್ದವನಿಗೆ ದಿವ್ಯಾಳ ಕರೆ ಅಕ್ಷರಶಃ ಸಿಡಿಲಿನಂತೆ ಅಪ್ಪಳಿಸಿತ್ತು. "ನಿನ್ ಹತ್ರ ಸ್ವಲ್ಪ ಮಾತಾಡ್ಬೇಕು, ಸಂಜೆ ಆಫೀಸ್ ಮುಗಿದ ಮೇಲೆ ಸಿಗೋಣ, ಮಾಮೂಲಿ ಜಾಗ" ಎಂಬ ಮೂರು ಚಿಲ್ಲರೆ ಪದಗಳನ್ನು ಬಿಟ್ಟು ದಿವ್ಯಾ ಹೆಚ್ಚೇನನ್ನೂ ಹೇಳಿರಲಿಲ್ಲ. ಕೆಲವು ಮಾತುಗಳನ್ನು ತೀರಾ ಬಿಡಿಸಿ ನೋಡುವುದು ಬೇಡ, ಅವುಗಳು ಬಳಕೆಯಾಗಿರುವ ಸಾವಿರಾರು ಸನ್ನಿವೇಶಗಳನ್ನು ಕಂಡಿರುವುದರಿಂದ ಅರ್ಥೈಸುವುದು ಸುಲಭವೇ. ದಿವ್ಯಾ ತನ್ನೊಂದಿಗೆ ಬ್ರೇಕಪ್ ಮಾಡಿಕೊಳ್ಳಲಿದ್ದಾಳೆ ಎಂಬುದು ಮ್ಯಾನೇಜರ್ ಈ ವಾರಾಂತ್ಯ ಕೂಡಾ ಕೆಲಸ ಮಾಡಲು ಹೇಳುತ್ತಾನೆ ಎಂಬಷ್ಟೇ ನಿಚ್ಚಳವಾಗಿತ್ತು ಪ್ರಶಾಂತನಿಗೆ. ವಾರಾಂತ್ಯ ಕೆಲಸ ಮಾಡಲು ಅವನಿಗೆ ಹೇಗೆ ಚೂರೂ ಇಷ್ಟವಿಲ್ಲವೋ ಹಾಗೆಯೇ ದಿವ್ಯಾಳನ್ನು ಬಿಡಲು ಕೂಡ ಸುತಾರಾಂ ಇಷ್ಟವಿರಲಿಲ್ಲ. ಹುಟ್ಟು ಮತ್ತು ಸಾವುಗಳ ಮಧ್ಯೆ ಮನುಷ್ಯ ಹೆಚ್ಚಿನ ಸಮಯ ವ್ಯರ್ಥ ಮಾಡುವುದು ಆಲೋಚನೆಗಳಲ್ಲಿಯೇ ಅಲ್ಲವೇ?!. ಪ್ರಶಾಂತನಿಗೂ ಸಂಜೆಯ ತನಕ ಸಮಯವಿತ್ತು. ಸಾವಿರ ಆಲೋಚನೆಗಳೂ ಇದ್ದವು.

ಇದು ದಿಢೀರ್ ನಿರ್ಧಾರವಂತೂ ಅಲ್ಲ. ಸರಿಯಾಗಿ ಕಣ್ಣು ಬಿಟ್ಟು ನೋಡಿದ್ದರೆ ಈ ದಿನದ ಮುನ್ಸೂಚನೆಗಳು ಢಾಳಾಗಿ ಕಾಣಿಸುತ್ತಿದ್ದವು. ಆದರೇನು ಮಾಡುವುದು, ಒಮ್ಮೆ ಪ್ರೀತಿಸಲು ಶುರುವಿಟ್ಟ ಮೇಲೆ ಅವಳ ಎಲ್ಲಾ ಯೋಚನೆಗಳಲ್ಲೂ, ಹೆಜ್ಜೆಗಳಲ್ಲೂ ನಾನಿದ್ದೇ ಇರುತ್ತೇನೆಂಬ ಹುಂಬ ನಂಬಿಕೆ. ಅಂದು ಅವಳು ಮನೆಗೆ ಬಂದಾಗಲೂ ಅದೇ ಹುಂಬತನ ನನ್ನನ್ನು ಕುರುಡಾಗಿಸಿತ್ತು ಅನಿಸುತ್ತದೆ. ಹೌದು, ಎರಡೂವರೆ ವರ್ಷಗಳ ನಮ್ಮ ಒಡನಾಟದಲ್ಲಿ ಅಂತೂ ಇಂತೂ ಕೊನೆಗೂ ದಿವ್ಯಾ ಅನಿವಾರ್ಯವಾಗಿ ನನ್ನ ಮನೆಗೆ ಕಾಲಿರಿಸಿದ್ದಳು. ನನಗೋ ವರ್ಷಗಟ್ಟಲೆ ತಪಸ್ಸಿನ ನಂತರ ಅವತರಿಸಿದ ದೇವಿಯನ್ನು ಉಪಚರಿಸಲೋ, ಅವಳ ಬಳಿ ವರ ಕೇಳಲೋ ಎಂಬ ಗೊಂದಲ. ಪುಟ್ಟ ಮಗುವೊಂದು ಮನೆಗೆ ಬಂದ ಅತಿಥಿಗಳಿಗೆ ತನ್ನ ಆಟದ ಸಾಮಾನುಗಳ ಪೆಟ್ಟಿಗೆಯನ್ನು ತೆಗೆದು ಹರಡಿ ಅವರ ಆಸಕ್ತಿಯ ಬಗ್ಗೆ ತಲೆ ಕೆಡಿಸಿಕೊಳ್ಳದೇ ಆಸ್ಥೆಯಿಂದ ವಿವರಿಸುವಂತೆ ನಾನೂ ನನ್ನ ಹಳೇ ಆಲ್ಬಮ್ಮು, ಪ್ರಾಥಮಿಕ ಶಾಲೆಯಲ್ಲಿ ಗೆದ್ದ ಶೀಲ್ಡು, ಕರ್ಟನ್ನು, ಬೆಡ್ ಶೀಟು, ಹಾಸಿಗೆ ಎಲ್ಲವನ್ನೂ ವಿಜಯನಗರ ಸಾಮ್ರಾಜ್ಯದ ಪಳೆಯುಳಿಕೆಗಳಂತೆ ಅನಾವರಣಗೊಳಿಸುತ್ತಿದ್ದೆ.

ಹೌದು, ನಾನು ಅವಳೆಡೆಗೊಮ್ಮೆ ನೋಡಬೇಕಿತ್ತು. ಮನದ ಮೂಲೆಮೂಲೆಯನ್ನೂ ತಲುಪಲು ಇಷ್ಟವಿಲ್ಲದವಳು ಮನೆಯ ಮೂಲೆಮೂಲೆಯನ್ನು ಕಟ್ಟಿಕೊಂಡು ಏನು ಮಾಡುತ್ತಾಳೆ. ಸೋಫಾದ ಮೇಲೆಯೇ ಕುಳಿತಿದ್ದವಳು ಮಳೆಯ ಕೊನೆಯ ಹನಿ ಭೂಮಿ ಸೇರುವುದಕ್ಕೂ ಮುನ್ನವೇ "ಅಮ್ಮ ಆವಾಗಿಂದ ಫೋನ್ ಮಾಡ್ತಾ ಇದಾರೆ" ಎಂದು ಎದ್ದು ಹೋದಳು. ಆ ಅಸಡ್ಡೆ ಅದು ಹೇಗೆ ನನಗೆ ನಾಚಿಕೆಯಾಗಿ ಕಂಡಿತು? ಅವಳಿಗೆ ನಾನು ಮತ್ತು ನನ್ನ ಮನೆ ಮಳೆ ಬಂದಾಗ ಒದ್ದೆಯಾಗದಂತೆ ತತ್ಕಾಲಕ್ಕೆ ರಕ್ಷಣೆ ನೀಡುವ ಬೀಡಾ ಅಂಗಡಿಯ ಛಾವಣಿಯಂತೆ ಅಷ್ಟೇ ಎನ್ನುವ ಸತ್ಯ ಆಗ ಹೊಳೆಯಲಿಲ್ಲ. ಎಷ್ಟಾದರೂ ಒಂದು ಬ್ರೇಕಪ್ಪಿನ ಬೇಜಾರಲ್ಲಿ ಅವಳು ಕಣ್ಣೀರಾಗಿದ್ದಾಗ ಧೈರ್ಯ ಹೇಳಲು ಹೋಗಿ ಜೊತೆಯಾದವನು ನಾನಲ್ಲವೇ?, ತತ್ಕಾಲದ ಛಾವಣಿ!. "ಪ್ರಶಾಂತ್ ಕ್ಯಾನ್ ಯು ಪ್ಲೀಸ್ ಕಮ್ ಟು ಮೈ ಕ್ಯಾಬಿನ್?" ಎಂಬ ಮ್ಯಾನೇಜರಿನ ಮೆಸೇಜು ಪ್ರಶಾಂತನನ್ನು ಅವನ ಆಲೋಚನೆಗಳಿಂದಲೂ ಮತ್ತು ಅವನ ಕುರ್ಚಿಯಿಂದಲೂ ಬೇರ್ಪಡಿಸಿತು.

"ಯು ನೋ ವಿ ಆರ್ ಲ್ಯಾಗಿಂಗ್ ಬಿಹೈಂಡ್ ಬೈ ಹ್ಯೂಜ್ ಮಾರ್ಜಿನ್. ಐ ಹೋಪ್ ಐ ಆಮ್ ನಾಟ್ ಆಸ್ಕಿಂಗ್ ಫಾರ್ ಟೂ ಮಚ್" ಎಂದ ಮ್ಯಾನೇಜರ್ ಎಂದಿನಂತೆ ಪ್ರಶಾಂತನಿಂದ ಒಂದು ಮೌನ ಮತ್ತೊಂದು ತಲೆಯಾಡಿಸುವಿಕೆಯನ್ನು ನಿರೀಕ್ಷಿಸಿದ್ದನೇನೋ?

"ಇನ್ ಫ್ಯಾಕ್ಟ್ ಯು ಆರ್, ಬಟ್ ಡು ಐ ಹ್ಯಾವ್ ಅ ಚಾಯ್ಸ್?" ಎಂಬ ಪ್ರಶಾಂತನ ಪ್ರತ್ಯುತ್ತರ ಅವನನ್ನು ಅಚ್ಚರಿಗೊಳಿಸಿದ್ದಕ್ಕಿಂತ ಹೆಚ್ಚು ಗಾಬರಿಗೊಳಿಸಿತೆನ್ನಿಸುತ್ತದೆ. ಪ್ರೀತಿ ಬದುಕಿನಲ್ಲಿ ಧೈರ್ಯ ನೀಡುತ್ತದೆ ಎಂದು ಎಲ್ಲೋ ಓದಿದ್ದ ಪ್ರಶಾಂತ ಬ್ರೇಕಪ್ ಕೂಡಾ ಇಷ್ಟೊಂದು ಧೈರ್ಯ ನೀಡುತ್ತಾ ಎಂದು ಯೋಚಿಸುತ್ತಾ ಮತ್ತೆ ತನ್ನ ಟೇಬಲ್ ಬಳಿಗೆ ಬರುವಷ್ಟರಲ್ಲಿ ಕುರ್ಚಿಯ ಮೇಲೆ ದಿವ್ಯಾ ಇತ್ತೀಚೆಗಷ್ಟೇ ಹುಟ್ಟುಹಬ್ಬಕ್ಕೆ ಕಾಣಿಕೆಯಾಗಿ ನೀಡಿದ್ದ ಮೊಬೈಲ್ ಕಾಣಿಸಿತು. ಮೇಲೇಳುವಾಗ ಅವನ ಜೇಬಿನಿಂದ ಜಾರಿ ಬಿದ್ದಿದ್ದ ಅದು ಕೈಜಾರಿ ಹೋಗಿರುವ ಪ್ರೀತಿಗೆ ಉಪಮಾನದಂತೆ ಕಾಣಿಸಿ ಪ್ರಶಾಂತ ಮ್ಲಾನವದನನಾದ. ಪ್ರೀತಿಯೇ ಸತ್ತ ಮೇಲೆ ಪ್ರೀತಿಯ ದ್ಯೋತಕಗಳನ್ನಿಟ್ಟುಕೊಂಡು ಏನು ಮಾಡುವುದು?. ಸಿಮ್ ತೆಗೆದು ಮೊಬೈಲನ್ನು ಅವಳಿಗೇ ವಾಪಸ್ ಕೊಡೋಣ ಎಂದು ಎತ್ತಿಟ್ಟುಕೊಂಡ. ಅಷ್ಟರಲ್ಲಿ ಕೈಯಲ್ಲಿರುವ ಬ್ರೇಸ್ಲೆಟ್ ಕೂಡಾ ಅವಳೇ ಕೊಡಿಸಿದ್ದೆಂದು ನೆನಪಾಯಿತು. ಅದನ್ನೂ ತೆಗೆದ. ತನ್ನ ಶರ್ಟು, ಶೂ, ಬ್ಯಾಗು ಎಲ್ಲವೂ ಅವಳ ಗಿಫ್ಟೇ ಎಂದರಿವಾಯಿತು. ಅಲ್ಲವೇ ಮತ್ತೆ! ದಿವ್ಯಾ ಜೊತೆ ವಿಶಾಲ್ ಬ್ರೇಕಪ್ ಮಾಡಿಕೊಳ್ಳುವ ಮುನ್ನ "ನೀವೆಲ್ಲಾ ನಮ್ಮೂರ್ ಜಿಗಣೆ ತರ, ಅವು ರಕ್ತ ಹೀರ್ತವೆ, ನೀವು ದುಡ್ಡು ಖರ್ಚು ಮಾಡಿಸ್ತೀರಾ" ಎಂದು ಹೇಳಿದ್ದ. ಅದೊಂದೇ ಮಾತು ದಿವ್ಯಾಳನ್ನು ಯಾವಾಗಲೂ ಕೊರೆಯುತ್ತಿತ್ತು